ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ಯಂತ್ರಕಲೆ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ರಾಜ್ಯ ಸಚಿವರು.)

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣದ ದೃಷ್ಟಿಕೋನದಿಂದ ಸದರಿ ಕಾರ್ಖಾನೆಯ ಸ್ಥಾಪನೆಯ ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಿ, ಷರತ್ತುಗಳಿಗೆ ಬದ್ದಗೊಳಿಸಿ, ನಂತರ ಅನುಮತಿ ನೀಡಿತ್ತು.

ಆ) ಪ್ರಾದೇಶಿಕ ಕಛೇರಿಯವರ ಸ್ಥಳ ಪರಿವೀಕ್ಷಣೆ ನಂತರ ಕೈಗಾರಿಕೆ ಮತ್ತು ಕನ್‌ಸಲ್ ಟೆಂಟರವರಿಂದ ತಾಂತ್ರಿಕ ಪ್ರೆಸೆಂಟೇಷನ್ ನಡೆಸಿ ಅವರಿಂದ ವಿವರವಾದ ವರದಿಯನ್ನು ಪಡೆದು ಕೂಲಂಕುಷವಾಗಿ ಪರಿಶೀಲಿಸಿ ನಂತರ ಅನುಮತಿ ನೀಡಿರುತ್ತದೆ. ಇದರಲ್ಲಿ ಯಾವುದೇ ತರಾತುರಿ ಇರುವುದಿಲ್ಲ.

ಇ) 'ಅ'ಮತ್ತು'ಆ' ಉತ್ತರದಿಂದಾಗಿ ಉದ್ಭವಿಸುವುದಿಲ್ಲ. ಆದಾಗ್ಯೂ ಸಾರ್ವಜನಿಕ ಹಿತಕ್ಕೆ ದಕ್ಕೆ ತರುವಂತಹ ಕ್ರಮಗಳನ್ನು ಅಧಿಕಾರಿಗಳು ಕೈಗೊಂಡಲ್ಲಿ ಅಂತಹವರ ವಿರುದ್ದ ಸರ್ಕಾರ ಕ್ರಮ ಕೈಗೊಳ್ಳುವುದು. ಎನ್.ಜಿ.ಇ.ಎಫ್. ಕಾರ್ಖಾನೆಯಲ್ಲಿ ನಷ್ಟ

ಎನ್.ಜಿ.ಇ.ಎಫ್. ಕಾರ್ಖಾನೆಯಲ್ಲಿ ನಷ್ಟ

718 - ಶ್ರೀ ಟಿ.ಬಿ. ಜಯಚಂದ್ರ,(ಕಳ್ಳಂಬೆಳ್ಳ) ಮಾನ್ಯ ಬಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಇದುವರೆವಿಗೂ ಎನ್.ಜಿ.ಇ.ಎಫ್. ಕಾರ್ಖಾನೆಯಿಂದಾಗಿರುವ ನಷ್ಟದ ಮೊತ್ತವೆಷ್ಟು?

೨) ನಷ್ಟದಲ್ಲಿರುವ ಕಾರ್ಖಾನೆಯನ್ನು ಪುನಃ ಶ್ಚೇತನಕ್ಕಾಗಿ ನೇಮಕ ಮಾಡಿರುವ ಸಮಿತಿಗಳಾವುವು? ಸಮಿತಿಗಳ ವರದಿ ಏನು? ಅವುಗಳನ್ನು ಕಾರ್ಯಗತಗೊಳಿಸಲು ಸರ್ಕಾರ ಕೈಗೊಂಡ ತೀರ್ಮಾನವೇನು?

೩) ನಷ್ಟದಲ್ಲಿರುವ ಕಾರ್ಖಾನೆಯನ್ನು ಸರ್ಕಾರ ಖಾಸಗೀಕರಣಕ್ಕಾಗಿ ತೀರ್ಮಾಮಿಸಿದೆಯೇ ಅಥವಾ ಸರ್ಕಾರದ ಕಾರ್ಖಾನೆಯನ್ನು ಉಳಿಸುವ ಬಗ್ಗೆ ತೀರ್ಮಾನವೇನು?

ಮಹಿಳಾ ಮಂಡಳಿಗೆ ಹೊಲಿಗೆ ಮಜೂರಿ ಮಂಜೂರಾತಿಯ ಬಗ್ಗೆ.

618 - ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿ ಜಿಲ್ಲೆಯಲ್ಲಿ ಮಹಿಳಾ ಮಂಡಳಿಗಳಿಗೆ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ೧೯೯೩-೯೪ನೇ ಸಾಲಿನಲ್ಲಿ ಸಿದ್ದ ಉಡುಪುಗಳನ್ನು ಸಿದ್ದಪಡಿಸಿದ್ದಕ್ಕಾಗಿ ಹೊಲಿಗೆ ಮಜೂರಿ ಯನ್ನು ಇದುವರೆವಿಗೂ ಪಾವತಿ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಹಾಗಿದ್ದಲ್ಲಿ ಬಾಕಿ ವಿತರಿಸಬೇಕಾಗಿರುವ ಮಹಿಳಾ ಮಂಡಳಿಗಳ ಸಂಖ್ಯೆ ಎಷ್ಟು ಹಾಗೂ ಬಾಕಿ ಎಷ್ಟು, ಯಾವ ಕಾರಣಕ್ಕಾಗಿ ಬಾಕಿ ಇರುವುದು.

ಇ) ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ ಬಿ.ಟಿ.ಲಲಿತಾನಾಯಕ್ (ಕನ್ನಡ,ಸಂಸ್ಕೃತಿ,ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ಹೌದು.

ಆ) ತುಮಕೂರು ಜಿಲ್ಲೆಯಲ್ಲಿ ಬಾಕಿ ವಿತರಿಸಬೇಕಾಗಿರುವ ಮಹಿಳಾ ಮಂಡಳಿಗಳ ಸಂಖ್ಯೆ:೮೦ ಹಾಗೂ ಬಾಕಿ ಮೊತ್ತ ರೂ.೨,೨೫,೬೮೦-೦೦. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಒಂದು ಜೊತೆ ಸಮ ವಸ್ತ್ರವನ್ನು ಉಚಿತವಾಗಿ ಸರಬರಾಜು ಮಾಡುವ ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನಾ ಅಡಿಯಲ್ಲಿ ಶೇಕಡ ೫೦ರಷ್ಟು ಹೊಲಿಗೆ ಕೆಲಸವನ್ನು ಮಹಿಳಾ ಅಭಿವೃದ್ಧಿ ನಿಗಮದ ಸ್ಥಳೀಯ ಮಹಿಳಾ ಮಂಡಳಿಗಳ ಮುಖೇನಾ ನಿರ್ವಹಿಸುತ್ತಿದೆ. ಹೊಲಿಗೆ ಕೆಲಸವನ್ನು ಪೂರೈಸಿದ ತಕ್ಷಣ ಮಹಿಳಾ ಅಭಿವೃದ್ಧಿ ನಿಗಮದ ಹಣದಿಂದ ಶೇಕಡ ೭೫ ರಷ್ಟು ಹೊಲಿಗೆ ದರವನ್ನು ಮಹಿಳಾ ಮಂಡಳಿಗಳಿಗೆ ನೀಡಲಾಗುತ್ತಿದೆ. ಈ ಯೋಜನೆಯು ಶಿಕ್ಷಣ ಇಲಾಖೆಯ ಕಾರ್ಯಕ್ರಮವಾಗಿರುತ್ತದೆ. ಹೊಲಿಗೆ ಕೂಲಿ ಹಣ ಅಂತಿಮವಾಗಿ ಆ ಇಲಾಖೆಯಿಂದ ಮಂಜೂರಾಗ ಬೇಕಾಗಿರುತ್ತದೆ. ಶಿಕ್ಷಣ ಇಲಾಖೆಯಿಂದ ಹೊಲಿಗೆ ಹಣವನ್ನು ಕಡಿತ ಮಾಡಿಕೊಂಡು ಉಳಿದ ಶೇಕಡ ೨೫ರಷ್ಟನ್ನು ಮಹಿಳಾ ಮಂಡಳಿಗೆ ವಿತರಣೆ ಮಾಡಲಾಗುವುದು. ಈಗಾಗಿ ಶಿಕ್ಷಣ ಇಲಾಖೆಯಿಂದ ಪೂರ್ಣ ಹಣವು ಮಂಜೂರಾಗಿ ಬಂದಿರುತ್ತದೆ. ಉಳಿದ ಮಂಡಳಿಗೆ ಈ ತಿಂಗಳಲ್ಲಿ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಭೂನ್ಯಾಯ ಮಂಡಲಿ ಆದೇಶಕ್ಕೆ ವಿರುದ್ಧವಾಗಿ ಕಟ್ಟಡ ಕಟ್ಟತ್ತಿರುವ ಬಗ್ಗೆ.

೬೨೦ - ಶ್ರೀ ಟಿ.ಬಿ.ಜಯಚಂದ್ರ(ಕಳ್ಳಂಬೆಳ್ಳ ಕ್ಷೇತ್ರ) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ತಾಲ್ಲೂಕು ವೀರಸಾಗರ ಗ್ರಾಮದ ಸರ್ವೆ ನಂ.೩೩: ರಲ್ಲಿ ಭೂನ್ಯಾಯ ಮಂಡಲಿ ಆದೇಶಕ್ಕೆ ವಿರುದ್ಧವಾಗಿ ಕೊಳಚೆ ನಿರ್ಮೂಲನ ಮಂಡಲಿಯವರು ಅನಧಿಕೃತವಾಗಿ ಪ್ರವೇಶಿಸಿ ಕಟ್ಟಡ ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ ಭೂ ನ್ಯಾಯ ಮಂಡಲಿ ಆದೇಶದಂತೆ ಜಮೀನನ್ನು ಗೇಣಿದಾರರಿಗೆ ವಾಪಸ್ಸು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ಹಾಗಿದ್ದಲ್ಲಿ ಎಂದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :